ಅಧ್ಯಕ್ಷರು:- ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರಗಳನ್ನು ಸದನದ ಮುಂದೆ ಮಂಡಿಸಲಾಯಿತು.

2. ವರದಿಗಳನ್ನು ಒಪ್ಪಿಸುವುದು.

ಶ್ರೀ ಬಸವರಾಜ ಪಾಟೀಲ್ ಅಟ್ಟೂರು:- ಮಾನ್ಯ ಅಧ್ಯಕ್ಷರೇ ಹಟ್ಟಿ ಚಿನ್ನದ ಗಣಿಯ ಕಂಪನಿ ನಿಯಮಿತದ ಮೇಲೆ 72ನೇ ವರದಿ. 2) ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ನಿಯಮಿತದ ಮೇಲೆ 73ನೇ ವರದಿ, 3) ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಹಾಗೂ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಗಳಿಗೆ ಸಂಬಂಧಪಟ್ಟಂತೆ 74ನೇ ವರದಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು:- ಮಂಡಿಸಲಾಗಿದೆ.

3. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು.

(ಅ) ಕಮಲಾಪುರ ಮೀಸಲು ಕ್ಷೇತ್ರದಲ್ಲಿನ ನೀರಿನ ಸಮಸ್ಯೆ.

+ ಶ್ರೀ ರೇವುನಾಯಕ್:- (ಕಮಲಾಪುರ) ಮಾನ್ಯ ಅಧ್ಯಕ್ಷರೇ, ಗುಲ್ಬರ್ಗಾ ಜಿಲ್ಲೆಯಲ್ಲಿ ನನ್ನದು ಕಮಲಾಪುರ ಮೀಸಲು ಕ್ಷೇತ್ರ ಬರುತ್ತದೆ. ಆದರೆ ಅನೇಕ ಸಲ ನಾನು ಸರ್ಕಾರಕ್ಕೆ ನೀರಿನ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಮನವಿಯನ್ನು ಕೊಟ್ಟಿದ್ದೇನೆ. ಇಡೀ ನನ್ನ ಕ್ಷೇತ್ರದಲ್ಲಿ ನೀರಿನ ಹಾಹಾಕಾರ ಎದ್ದಿದೆ. ನನ್ನ ಕ್ಷೇತ್ರದಲ್ಲಿ ನನಗೆ ಆದಷ್ಟು ಮುಖಭಂಗ ಅವಮಾನ ನನ್ನ ಇಡೀ ಜೀವನದಲ್ಲಿ ಇದುವರೆಗೂ ಆಗಿಲ್ಲ ಅಷ್ಟು ಅವಮಾನ ಆಗಿದೆ. ಕಮಲಾಪುರ ಅದು ನನ್ನ ಹೆಡ್ ಕ್ವಾರ್ಟರ್ಸ್. ಅಲ್ಲಿ ಸುಮಾರು 20-30 ಸಾವಿರ ಜನ ಇದ್ದಾರೆ. ಅಲ್ಲಿ ನೀರಿನ ಸಮಸ್ಯೆ ಇದೆ. ಅಂತ ನಾನು ಪದೇ ಪದೇ ಹೇಳುತ್ತಿದ್ದೇನೆ. ಜಿಲ್ಲಾಧಿಕಾರಿಗಳು ಹೇಳುತ್ತಾರೆ, ನೀವು ಸತ್ಯಾಗ್ರಹ ಕೂತರೆ ನಾನು ನಿಮ್ಮ ಕೆಲಸ ಮಾಡುವಂತೆ ಇಲ್ಲ ಎಂದು ಹೇಳುತ್ತಾರೆ. ಇದನ್ನು ಕರೆದುಕೊಂಡು ಹೋದರೆ ಜನರನ್ನು ಏಕೆ ಕರೆದುಕೊಂಡು ಬರುತ್ತೀರಿ ಎಂದು ಕೇಳುತ್ತಾರೆ. ಮತ್ತೆ ಜಿಲ್ಲಾ ಪಂಚಾಯತಿಯವರನ್ನು ಕೇಳಿದರೆ ನಮಗೆ ದುಡ್ಡು ಕೊಟ್ಟಿಲ್ಲ ನಾವು ಏನು ಮಾಡೋಣ ಎಂದು ಅವರು ಕೇಳುತ್ತಾರೆ. ಕೇಂದ್ರ ಸರ್ಕಾರದ ಒಂದು ಟೀಮ್ ನಮ್ಮ ಕ್ಷೇತ್ರಕ್ಕೆ ಬಂತು, ಬರಗಾಲ ಪೀಡಿತ ಪ್ರದೇಶದ ವೀಕ್ಷಣೆ ಮಾಡುವುದಕ್ಕೆ, ಅಲ್ಲಿ ಸಮೀಕ್ಷೆ ಮಾಡಿದರು. ಕಿನ್ನಸಡಕ್ ಎಂಬ ಒಂದು ಊರು ಇದೆ. ಅಲ್ಲಿ ಅವರು ಒಂದು ಹೊಲಕ್ಕೆ ಭೇಟಿ ಕೊಟ್ಟು ಆ ಹೊಲ ಆಗ ಒಣಗಿತ್ತು. ಆ ಸಮಯದಲ್ಲಿ ಹೆಣ್ಣು ಮಗಳು ಬಂದು ತಮ್ಮ ಎದೆ ಎದೆ ಬಡಿದುಕೊಂಡು ಅವರ ಕಾಲಿಗೆ ಬಿದ್ದು ಅತ್ತಳು.

ಸೆಂಟ್ರಲ್ ಟೀಮಿನವರು ಮೀಟಿಂಗ್ ಮಾಡಿದಂಥ ಸಂದರ್ಭದಲ್ಲಿ, ಇಲ್ಲಿ ಬಹಳ ದುಷ್ಕ ಪರಿಸ್ಥಿತಿ ಇದೆ, ಇದರ ಬಗ್ಗೆ ಕೂಡಲೇ ರಾಜ್ಯ ಸರ್ಕಾರಕ್ಕೆ ಹಣ ಕೊಡುತ್ತೇವೆ, ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹಾರ ಮಾಡುತ್ತೇವೆ, ಜನವರಿ ತಿಂಗಳಿನಲ್ಲಿ ಜಾನುವಾರುಗಳಿಗೆ ಮೇವು ಕೊಡಿಸುತ್ತೇವೆಂದು ಹೇಳಿದರು. ದೊಡ್ಡ ರೈತರುಗಳಿಗೆ ಏನು ಮಾಡಲಾಗುತ್ತದೆಂದು ಕೇಳಿದಾಗ, ಈ ಬೇಸಿಗೆ ಕಾಲದಲ್ಲಿ ನಿಮ್ಮ ಹಳ್ಳಿಯಲ್ಲಿರುವ ಎಲ್ಲರಿಗೂ ಕೆಲಸ ಸಿಗುವ ಹಾಗೆ ಬರಗಾಲ